## ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 312 ಗ್ರಾಪಂಅ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:02-01-2019.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬೆಂಗಳೂರು.

ಇವರಿಗೆ:
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳು.

ಮಾನ್ಯರೆ,

ವಿಷಯ: ಪಂಚತಂತ್ರ ತಂತ್ರಾಂಶದಲ್ಲಿ ಬಿಟ್ಟು ಹೋದ ಆಸ್ತಿಗಳನ್ನು ಸೇರ್ಪಡೆ ಮಾಡುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪಂಚತಂತ್ರ ತಂತ್ರಾಂಶದಲ್ಲಿ ಇದುವರೆಗೂ ನಮೂದಿಸದೆ ಇರುವ ಆಸ್ತಿಗಳನ್ನು ಪಂಚತಂತ್ರಾಂಶದಲ್ಲಿ ನಮೂದಿಸಲು ಅವಕಾಶ ಕಲ್ಪಿಸಲಾಗಿದ್ದು, ನಿಯಮಾನುಸಾರವಿರುವ ಆಸ್ತಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ನಮೂದಿಸುವ ಬಗ್ಗೆ ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸುವಂತೆ ತಮಗೆ ತಿಳಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

1. ದಿನಾಂಕ 14.06.2013 ರ ಪೂರ್ವದಲ್ಲಿ ಸೃಷ್ಟಿಯಾದ, ಗ್ರಾಮ ಪಂಚಾಯತಿ ತೆರಿಗೆ ನಿರ್ಧರಣೆ ರಿಜಿಸ್ಟರಿನಲ್ಲಿ (ಡಿಸಿಬಿ ವಹಿ) ನಮೂದಾದ ನಿಯಮಾನುಸಾರವಿರುವ (ಸರ್ಕಾರಿ ಜಮೀನುಗಳಲ್ಲಿ, ಸ್ಥಳೀಯ ಸಂಸ್ಥೆಗಳ ಸ್ವತ್ತಿನಲ್ಲಿ, ಸರ್ಕಾರಿ ಸ್ವಾಮ್ಯದ ಶಾಸನಬದ್ಧನಿಕಾಯದ ಅಥವಾ ಸಂಸ್ಥೆಗಳ ಸ್ವತ್ತಿನಲ್ಲಿ ಇರುವ ಆಸ್ತಿಗಳನ್ನು ಹೊರತುಪಡಿಸಿ) ಆಸ್ತಿಗಳನ್ನು ಮಾತ್ರ ದಾಖಲಿಸಬಹುದು.
2. ದಿನಾಂಕ 14.06.2013 ರ ನಂತರ ನಿಯಮಾನುಸಾರ ಸೃಷ್ಟಿಯಾದ ಆಸ್ತಿಗಳನ್ನು ಕಡ್ಡಾಯವಾಗಿ ಇ-ಸ್ವತ್ತು ತಂತ್ರಾಂಶದ ಮೂಲಕ ದಾಖಲಿಸಬಹುದು.
3. ನಿಯಮಾನುಸಾರವಿರುವ ಗ್ರಾಮಠಾಣಾ ಆಸ್ತಿಗಳನ್ನು, ವಸತಿ ಯೋಜನೆಗಳಡಿಯಲ್ಲಿ ವಿತರಣೆಯಾದ ನಿವೇಶನ ಹಾಗೂ ಮನೆಗಳ ಆಸ್ತಿಗಳನ್ನು, ದಿನಾಂಕ 14.06.2013 ರ ಹಿಂದೆ ಭೂ ಪರಿವರ್ತನೆಗೊಂಡು ನಿಯಮಾನುಸಾರ ಸಕ್ಷಮ ಪ್ರಾಧಿಕಾರಗಳಿಂದ ನಕ್ಷೆ ಅನುಮೋದನೆಗೊಂಡು ಬಡಾವಣೆಗಳಾಗಿರುವ ಆಸ್ತಿಗಳನ್ನು ದಾಖಲಿಸಬಹುದು.
4. ದಿನಾಂಕ 14.06.2013 ರ ಪೂರ್ವದಲ್ಲಿ ಕೃಷಿ ಭೂಮಿಯಲ್ಲಿ ಮನೆ ನಿರ್ಮಿಸಿಕೊಂಡು ದಿನಾಂಕ 14.06.2013 ರ ಪೂರ್ವದ ವಿದ್ಯುತ್ ಬಿಲ್ ಹೊಂದಿರುವ ಆಸ್ತಿಗಳನ್ನು ದಾಖಲಿಸಬಹುದು.
5. 1992 ರ ನಂತರ ಭೂಪರಿವರ್ತನೆಗೊಂಡು, ನಿಯಮಾನುಸಾರ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ/ಅಭಿವೃದ್ಧಿ ಪ್ರಾಧಿಕಾರಗಳಿಂದ ಬಡಾವಣೆ ನಕ್ಷೆ ಅನುಮೋದನೆಗೊಳ್ಳದ ಬಡಾವಣೆಗಳಲ್ಲಿರುವ, ದಿನಾಂಕ 14.06.2013 ಕ್ಕಿಂತ ಹಿಂದೆ ಕನಿಷ್ಠ ಒಂದು ಬಾರಿಯೂ ಮಾರಾಟವಾಗದ (Transaction) ಆಸ್ತಿಗಳನ್ನು ದಾಖಲಿಸುವಂತಿಲ್ಲ ಅಥವಾ ಮನೆಯಾಗಿದ್ದಲ್ಲಿ ದಿನಾಂಕ 14.06.2013 ಕ್ಕಿಂತ ಹಿಂದಿನ ಒಂದು ತಿಂಗಳ ವಿದ್ಯುತ್ ಬಿಲ್ ಇರುವ ಮನೆಗಳನ್ನು ದಾಖಲಿಸುವುದು.

ಹೊರಡಿಸಿದೆ 8 15/1
..........ದಿನಾಂಕ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

6. ಭೂಪರಿವರ್ತನೆಯಾಗದ ಪ್ರದೇಶದಲ್ಲಿರುವ ಬಡಾವಣೆಗಳಲ್ಲಿರುವ ಆಸ್ತಿಗಳು ಗೋಮಾಳದಲ್ಲಿರುವ ಹಾಗೂ ಕೆರೆ ಪ್ರದೇಶದಲ್ಲಿರುವ ಆಸ್ತಿಗಳು, ಭೂಪರಿವರ್ತನೆಯಾಗದ ಪ್ರದೇಶದಲ್ಲಿ (ಕೃಷಿ ಭೂಮಿ) ರಚನೆಯಾಗಿರುವ ಬಡಾವಣೆಗಳಲ್ಲಿರುವ ಆಸ್ತಿಗಳನ್ನು ದಾಖಲಿಸುವಂತಿಲ್ಲ.
7. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಇಂತಹ ಆಸ್ತಿಗಳನ್ನು ನಮೂದಿಸುವಾಗ ಆಸ್ತಿಗಳು ನಕಲು ಆಗದಂತೆ ಖಾತರಿಪಡಿಸಿಕೊಳ್ಳತಕ್ಕದ್ದು.
8. ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಪ್ರಸ್ತುತ ಗ್ರಾಮವಾರು ಇರುವ ಒಟ್ಟು ಆಸ್ತಿಗಳ ವಿವರಗಳನ್ನು ದೃಢೀಕರಿಸಿ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸುವುದು.
9. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಸಲ್ಲಿಸಿರುವ ಗ್ರಾಮವಾರು ಒಟ್ಟು ಆಸ್ತಿಗಳ ವಿವರವನ್ನು ಕಾರ್ಯನಿರ್ವಾಹಕ ಅಧಿಕಾರಿಗಳು /ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ರವರು ಪರಿಶೀಲನೆ ಮಾಡಿದ ನಂತರ ದೃಢೀಕರಿಸಿ ಸ್ಕ್ಯಾನ್ ಮಾಡಿ ಅಪ್ಲೋಡ್ ಮಾಡುವುದು.
10. ಪ್ರಸ್ತುತ ಗ್ರಾಮ ಪಂಚಾಯತಿವಾರು ಮತ್ತು ಗ್ರಾಮವಾರು ಪಂಚತಂತ್ರ ತಂತ್ರಾಂಶದಲ್ಲಿ ಕೈಬಿಟ್ಟು ಹೋಗಿರುವ ಆಸ್ತಿಗಳ ವಿವರ, ತೆರಿಗೆ ವಿವರಗಳನ್ನು ನಮೂದಿಸುವುದು.

ಮೇಲ್ಕಂಡಂತೆ ಪಂಚತಂತ್ರಾಂಶದಲ್ಲಿ ಕೈಬಿಟ್ಟು ಹೋಗಿರುವ ಆಸ್ತಿಗಳನ್ನು ದಿನಾಂಕ:31-01-2019 ರೊಳಗೆ ಕಡ್ಡಾಯವಾಗಿ ನಮೂದಿಸುವಂತೆ ತಿಳಿಸಿದೆ.

ತಮ್ಮ ವಿಶ್ವಾಸಿ,

2/1/19

(ಎಂ.ಕೆ. ಕೆಂಪೇಗೌಡ)
ನಿರ್ದೇಶಕರು (ಪಂ.ರಾಜ್-1) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ.
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

2/1/19